**ದಿಃ 06.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮಧ್ಯಂತರ ಅರ್ಜಿ ಮೇಲೆ ಆದ ಆದೇಶದ ಮೇರೆಗೆ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ವೈಎಂ ಆರ್ ವಕೀಲರಿಂದ**

ಪ್ರತಿವಾದಿಯರು ಏನು ತಕರಾರು ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ದಿನಾಂಕ 31.03.2011 ರಂದು ಕರಾರು ಪತ್ರ ಆಗುವ ಪೂರ್ವದಲ್ಲಿ ನನ್ನ ಮತ್ತು ಪ್ರತಿವಾದಿಯರ ನಡುವೆ ಮಾತುಕತೆಯಾಗಿತ್ತು. ಸದರಿ ಮಾತುಕತೆ ಆಕಳಿಕಟ್ಟಿಯಲ್ಲಿ ಆಗಿತ್ತು ಆದರೆ ದಿನಾಂಕ ನೆನಪಿಲ್ಲ. ದಾವಾದ ಆಸ್ತಿ ತೋಟ ಎಂದರೆ ಸರಿ. ಸದರಿ ತೋಟಕ್ಕೆ ಶಾಂತಿಸಾಗರದಿಂದ ನೀರು ತರಲು ಪೈಪ್ ಲೈನ್ ಆಗಿರುತ್ತದೆ ಎಂದರೆ ಸರಿ. ಸದರಿ ಪೈಪ್ ಲೈನ್ ಮಾಡುವ ಸಂಬಂಧ ಪ್ರತಿವಾದಿಯರು ನನ್ನಿಂದ ಸಾಲ ಪಡೆದಿದ್ದರು ಎಂದರೆ ಸರಿ. 2011 ನೇ ಇಸವಿಯಲ್ಲಿ 25 ಲಕ್ಷ ಸಾಲ ಪಡೆದಿದ್ದರು. ಆದರೆ ನಿಖರವಾದ ದಿನಾಂಕ ಗೊತ್ತಿಲ್ಲ. ಹಣ ಕೊಡುವಾಗ ಆಕಳಿಕಟ್ಟೆಯ ಸತೀಶ್ ಮತ್ತು ಸಿದ್ದರಾಮಪ್ಪ ಎನ್ನುವವರು ಮತ್ತು ಅರಳಿಕಟ್ಟೆಯ ರಾಜಶೇಖರಪ್ಪ ತಂದೆ ಚಂದ್ರಪ್ಪ ಎನ್ನುವವರು ಹಾಜರಿದ್ದರು. ಸಾಲದ ಖಾತ್ರಿಗೋಸ್ಕರ ಕರಾರು ಪತ್ರ ಆಗಿತ್ತು ಎಂದರೆ ಸರಿ. 2011 ರಲ್ಲಿ ಅಡಿಕೆ ತೋಟ ಇರುವ ಒಂದು ಎಕರೆ ತೋಟಕ್ಕೆ ಸುಮಾರು 50-60 ಲಕ್ಷ ಇತ್ತು ಎಂದರೆ ಸಾಕ್ಷಿಯು 8-10 ಲಕ್ಷ ಇತ್ತು ಎಂದು ನುಡಿಯುತ್ತಾರೆ. ಪ್ರತಿವಾದಿಯರು ಸಾಲದ ಹಣವನ್ನು ಮರುಪಾವತಿ ಮಾಡುತ್ತೇವೆ ಕರಾರು ಪತ್ರವನ್ನು ರದ್ದುಪಡಿಸುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯರು ಸಾಲದ ಹಣ ಮರುಪಾವತಿಸುತ್ತೇವೆ ಎಂದು ಹೇಳಿದರು ಸಹ ಅದನ್ನು ಕೇಳದೇ ನಾನು ಕರಾರು ಪತ್ರದ ಮೇರೆಗೆ ಆಸ್ತಿಯ ಮೇಲೆ ದಾವೆ ದಾಖಲಿಸಿದ್ದೇನೆ ಎಂದರೆ ಸಾಕ್ಷಿಯು ಪ್ರತಿವಾದಿಯರು ಜಮೀನು ಕೊಡುತ್ತೇನೆ ಎಂದು ಕರಾರು ಪತ್ರ ಬರೆದುಕೊಟ್ಟಿದ್ದರು ಎಂದು ನುಡಿಯುತ್ತಾರೆ. 2011 ರ ನಂತರ ದಾವೆ ಹಾಕುವ ಪೂರ್ವದಲ್ಲಿ ಯಾವತ್ತು ಪ್ರತಿವಾದಿಯರಿಗೆ ಬಾಕಿ ಉಳಿದ ಹಣವನ್ನು ಪಡೆದು ಖರೀದಿ ಪತ್ರ ಮಾಡಿಕೊಡುವಂತೆ ಕೇಳಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ನೇರವಾಗಿ ಕೇಳಿದ್ದೆ ಆಗ ಯಾವುದೇ ಸಾಕ್ಷಿದಾರರು ಇರಲಿಲ್ಲ. ನಾನು ಯಾವುದೇ ಬ್ಯಾಂಕಿನಲ್ಲಿ ಬಾಕಿ ಉಳಿದ 10 ಲಕ್ಷ ಹಣವನ್ನು ಠೇವಣಿ ಇಟ್ಟಿಲ್ಲ ಎಂದರೆ ಸರಿಯಲ್ಲ. 25 ಲಕ್ಷ ಹಣ ಕೊಟ್ಟಾಗ ಬಾಕಿ ಉಳಿದ 10 ಲಕ್ಷ ಹಣ ಕೊಟ್ಟು ಖರೀದಿ ಪತ್ರ ಮಾಡಿಸಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಆಗ ನನ್ನ ಬಳಿ ಹಣ ಇರಲಿಲ್ಲ ಎಂದು ನುಡಿಯುತ್ತಾರೆ. 2022 ರ ವರೆಗೆ ನನ್ನ ಬಳಿ ಹಣ ಇರುತ್ತದೆ ಖರೀದಿ ಪತ್ರ ಮಾಡಿಕೊಡುವಂತೆ ಪ್ರತಿವಾದಿಯರನ್ನು ನಾನು ಯಾವತ್ತು ಕೇಳಿಲ್ಲ ಎಂದರೆ ಸರಿಯಲ್ಲ. ದಾವಾದ ಆಸ್ತಿಯನ್ನು ಬಿಟ್ಟರೆ ಪ್ರತಿವಾದಿಯರಿಗೆ ಬೇರೆ ಯಾವುದೇ

ಆಸ್ತಿ ಇಲ್ಲ ಎಂದರೆ ಸರಿ. ಪ್ರತಿವಾದಿಯರ ಕುಟುಂಬದ ನಿರ್ವಹಣೆ ದಾವಾದ ಆಸ್ತಿಯಿಂದ ಆಗುತ್ತಿದೆ ಎಂದರೆ ಸರಿ. ದಾವಾದ ಆಸ್ತಿಯನ್ನು ಅಭಿವೃದ್ದಿ ಮಾಡುವ ಸಂಬಂದ ನನ್ನ ಬಳಿ ಸಾಲದ ಹಣ ಪಡೆದಿದ್ದರು ಎಂದರೆ ಸರಿ. ಆ ಹಣದ ಸಂಬಂಧವೇ ನಾನು ಈ ದಾವೆ ದಾಖಲಿಸಿದ್ದೇನೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.